ಸಿಡ್ನಿಯ ಸಿಟಿ ಸೆಂಟರಿನಲ್ಲಿರುವ ಪಿಟ್ ಸ್ಟ್ರೀಟ್ ಹಾಗು ಮಾರ್ಕೆಟ್ ಸ್ಟ್ರೀಟ್ ಕೂಡುವ ಜಾಗದಲ್ಲಿ ನಮ್ಮ ಆಫೀಸಿತ್ತು. ಸುಮಾರು ಎಂಬತ್ತು ವರ್ಷದ ಹಳೆಯ ಕಟ್ಟಡದ ಒಂಬತ್ತನೆಯ ಮಹಡಿಯಲ್ಲಿ ನಾನು ಕೂರುತ್ತಿದ್ದೆ. ನನ್ನ ಡೆಸ್ಕಿನ ಪಕ್ಕದಲ್ಲಿದ್ದ ದೊಡ್ಡ ಕಿಟಕಿಯಿಂದ ಟೌನ್‌ಹಾಲ್ ಸ್ಟೇಷನ್ ಕಾಣುತ್ತಿತ್ತು. ಸ್ಟೇಷನ್ನಿನಿಂದ ಗುಂಪು ಗುಂಪಾಗಿ ಹೊರಬೀಳುತ್ತಿದ್ದ ಜನರು ಕಾಣುತ್ತಿದ್ದರು. ಸ್ಟೇಷನ್ ಪಕ್ಕದಲ್ಲಿದ್ದ ಹೈಡ್ ಪಾರ್ಕಿನಲ್ಲಿ ಹುಲ್ಲು ಹಾಸಿನ ಮೇಲೆ ಮಲಗಿ ಆಕಾಶ ನೋಡುತ್ತಿರುವ ಹುಡುಗ ಹುಡುಗಿಯರು ಕಾಣುತ್ತಿದ್ದರು. ಪಾರ್ಕಿನ ಎದುರಿಗೆ ಎತ್ತರದ ಕುರ್ಚಿಯೊಂದರ ಮೇಲೆ ನಿಂತು ಗಟ್ಟಿಯಾಗಿ ಏಸುವಿನ ಗುಣಗಾನ ಮಾಡುತ್ತಿರುವ ವಯಸ್ಸಾದ ಗಂಡಸರು ಕಾಣುತ್ತಿದ್ದರು.

ನಮ್ಮ ಪ್ರಾಜೆಕ್ಟಿಗೆ ಕನ್ಸಲ್ಟಂಟ್ ಆಗಿ ಒಬ್ಬ ಹೊರಗಿನಿಂದ ಬರುತ್ತಾನೆಂಬ ಸುದ್ದಿಯಿತ್ತು. ಅವನು ಹಿಂದೊಮ್ಮೆ ನಮ್ಮ ಕಂಪನಿಯಲ್ಲಿ ಕೆಲಸ ಮಾಡಿದ್ದರಿಂದ ಕೆಲವರಿಗೆ ಅವನ ಪರಿಚಯವಿದ್ದಂತಿತ್ತು. ಅವನ ಪ್ರಸ್ತಾಪ ಮಾತಿನ ನಡುವೆ ಬಂದಾಗ ಗುಸು ಗುಸು ಮಾತು ನಡೆಯುತ್ತಿತ್ತು. 'ಸಿಡಿಜಿ' ಎಂದು ಕರೆಯಲಾಗುತ್ತಿದ್ದ ಅವನ ಹೆಸರು ಕೇಳಿದಾಗ ಯಾರೋ ಹೇಳಿದ್ದು – 'ಚಾರ್ಲೀ ಡೆಲ್ ಗ್ರಾಂಡ್'.

★★★

ರಾತ್ರಿ ಹ್ಯಾರಿಸ್ ಪಾರ್ಕ್ ರಸ್ತೆಯಲ್ಲಿ ನಡೆದಾಡುತಿದ್ದಾಗ ಒಂದು ಇಂಡಿಯನ್ ರೆಸ್ಟೋರೆಂಟ್ ಕಂಡು ಖುಷಿಯಾಯಿತು. ಹೆಚ್ಚೇನು ಜನ ಇರದಿದ್ದ ಆ ರೆಸ್ಟೋರೆಂಟನ್ನು ಮಧ್ಯವಯಸ್ಸಿನ ಹೆಂಗಸೊಬ್ಬಳು ನಡೆಸುತ್ತಿದ್ದಳು. ಶಾಲೆಗೆ ಹೋಗುವ, ಸುಮಾರು ಆರು, ಎಂಟು ವರುಷ ವಯಸ್ಸಿನ ತನ್ನ ಇಬ್ಬರು ಹೆಣ್ಣು ಮಕ್ಕಳು ಅಲ್ಲೇ ಒಂದು ಟೇಬಲ್ಲಿನ್ನಲ್ಲಿ ಕೂತು ಏನೋ ಬರೆಯುತ್ತಿದ್ದರು. ಕಡಿಮೆ ಬೆಲೆಗೆ ತೀರ ಮೋಸವಿಲ್ಲದ ದೋಸೆಯನ್ನು ತಿಂದ ಸಮಾಧಾನದಲ್ಲಿ ಹೊರಬೀಳುತ್ತಿದ್ದಾಗ ಕಂಡಿದ್ದು ಅದು. ಮಕ್ಕಳು ಕೂತಿದ್ದ ಟೇಬಲ್ಲಿನ ಕೆಳಗೆ ಒಂದರ ಮೇಲೊಂದು ಪೇರಿಸಿಟ್ಟ ಬಣ್ಣ ಬಣ್ಣದ ಪ್ಲಾಸ್ಟಿಕ್ ಡಬ್ಬಿಗಳು. ನೀಲಿ, ಕೆಂಪು, ಹಳದಿ ಹೀಗೆ. ಪುನಃ ಒಳಗೆ ಹೋಗಿ ಡಬ್ಬಿಯಲ್ಲಿರುವುದು ಏನೆಂದು ಕೇಳಿದಾಗ ಇಬ್ಬರ ಕಣ್ಣೂ ಅರಳಿತು. ಬರೆಯುತ್ತಿದ್ದ ಪುಸ್ತಕವನ್ನು ಪಕ್ಕಕ್ಕೆ ಸರಿಸಿ **"It's called 'Slime', uncle** ಎಂದರು. ಒಬ್ಬಳು, **"We make it ourselves!"** ಅಂದಳು. ಕಲಸಿಟ್ಟ ಚಪಾತಿ ಹಿಟ್ಟಿಗೆ ಬಣ್ಣ ಬೆರೆಸಿದಂತೆ ಕಾಣುತ್ತಿದ್ದ ಆ ವಿಚಿತ್ರ ವಸ್ತು ಏನೆಂದು ತಿಳಿಯುವ ಕುತೂಹಲವಾದರೂ ದಿನದ ದಣಿವು ತಡೆಯಲಾಗದೆ ಇಬ್ಬರಿಗೂ ಟಾಟಾ ಹೇಳಿ ಮನೆಗೆ ನಡೆದೆ.

★★★

ಸುಮಾರು ಒಂದು ತಿಂಗಳಾಗಿತ್ತೇನೋ. ಟೌನ್‌ಹಾಲ್ ಬಳಿಯ ಅದೇ ಕಾಫಿ ಶಾಪಿಗೆ ಬಂದವನೇ ಅವಳನ್ನು ನೋಡಿ ತಡೆಯಲಾಗದೇ ಹೇಳಿಬಿಟ್ಟೆ. ಎಲ್ಲರಿಗೂ ಕಾಫಿ ಕೊಡುವ ನಿನಗೆ ನಾನೊಂದು ಕಾಫಿ ಕೊಡಿಸಲೇಬೇಕೆಂದು. ನನ್ನ ಈ ಹುಚ್ಚು ಅಸಹಾಯಕ ಆಗ್ರಹ ಅವಳಲ್ಲಿ ಆಶ್ಚರ್ಯವನ್ನೋ, ದೈನ್ಯವನ್ನೊ ಉಂಟುಮಾಡಿರಬೇಕು. **"We will see about that!"** ಎಂದು ನಕ್ಕುಬಿಟ್ಟಳು. ನಾಚಿಕೆಯಿಂದ ಪಕ್ಕಕ್ಕೆ ನಿಂತು ಕಾಫಿಗಾಗಿ ಕಾಯುತ್ತಿದ್ದೆ. ಸ್ವಲ್ಪ ಹೊತ್ತಿನಲ್ಲಿ ಕಾಫಿ ತಂದುಕೊಟ್ಟ ಹುಡುಗ ಅದರ ಜೊತೆಗೆ ಚಿಕ್ಕ ಚೀಟಿಯೊಂದನ್ನು ಕೊಟ್ಟ. ಅದರಲ್ಲಿ ಕಂಡಿದ್ದನ್ನು ನಾನು ಖಂಡಿತಾ ಊಹಿಸಿರಲಿಲ್ಲ. **'Sarah – 0413783870'**. ನಂಬರ್ ನೋಡಿ ಬೆರಗಾಗಿ ಅದನ್ನು ಆತುರದಿಂದ ಚಿಕ್ಕದಾಗಿ ಮಡಿಚಿ ಜೇಬಿನಲ್ಲಿಟ್ಟುಕೊಂಡು, ಕದ್ದು ಅವಳನ್ನು ಮತ್ತೊಮ್ಮೆ ನೋಡಿ ಹೊರಡಲು ಸಿದ್ಧವಾಗುತಿದ್ದಂತೆ **"Call me tomorrow!!"** ಎಂದು ಅವಳು ಕೌಂಟರಿನಿಂದ ಜೋರಾಗಿ ಕೂಗಿದಳು. ಕಾಫಿ ಕೊಳ್ಳಲು ಸಾಲಿನಲ್ಲಿ ನಿಂತ ಎಲ್ಲರೂ ನನ್ನ ಕಡೆ ನೋಡಿದಾಗ ಸಂಕೋಚದಿಂದ ನನ್ನ ಮುಖ ಬೆಚ್ಚಗಾಗಿ ತಕ್ಷಣ ಹೊರಟುಬಿಟ್ಟೆ.